**Akashvani : Bangalore**
**Regional Bulletin In Kannada**
**16.03.2024 / 18.40 hrs**

ಆಕಾಶವಾಣಿ ಬೆಂಗಳೂರು

ಪ್ರದೇಶ ಸಮಾಚಾರ

**16.03.2024 / 18.40 hrs**

**<><*<><>*><>**

<u>ಮುಖ್ಯಾಂಶಗಳು</u>

೧. ಸಾರ್ವತ್ರಿಕ ಚುನಾವಣೆ ೨೦೨೪ರ ವೇಳಾಪಟ್ಟಿ ಪ್ರಕಟ - ೭ ಹಂತಗಳಲ್ಲಿ ಮತದಾನ - ಜೂನ್ ೪ ರಂದು ಮತ ಎಣಿಕೆ; ಮಾದರಿ ನೀತಿ ಸಂಹಿತೆ ತಕ್ಷಣದಿಂದ ಜಾರಿ

೨. ರಾಜ್ಯದಲ್ಲಿ ೨ ಹಂತಗಳಲ್ಲಿ, ಏಪ್ರಿಲ್ ೨೬ ಮತ್ತು ಮೇ ೭ ರಂದು ಮತದಾನ

೩. ತೊಂಬತ್ತೇಳು ಕೋಟಿಗೂ ಅಧಿಕ ನೋಂದಾಯಿತ ಮತದಾರರು ; ಇದೇ ಮೊದಲ ಬಾರಿಗೆ ೮೫ ವರ್ಷ ಮೀರಿದವರು ಹಾಗೂ ದಿವ್ಯಾಂಗ ಮತದಾರರಿಗೆ ಮನೆಯಿಂದಲೇ ಮತದಾನಕ್ಕೆ ಅವಕಾಶ

೪. ಎರಡು ಅವಧಿಯಲ್ಲಿ ತಮ್ಮ ಸರ್ಕಾರ ನೀಡಿರುವ ಜನೋಪಯೋಗಿ ಯೋಜನೆಗಳೇ ಈ ಚುನಾವಣೆಯಲ್ಲಿ ಬಿಜೆಪಿಗೆ ಶ್ರೀರಕ್ಷೆ - ಪ್ರಧಾನಮಂತ್ರಿ ನರೇಂದ್ರ ಮೋದಿ

೫. ಕಾಂಗ್ರೆಸ್ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಂದ ಪಕ್ಷದ ಇನ್ನೂ ೨ ನ್ಯಾಯ್ ಗ್ಯಾರಂಟಿ ಯೋಜನೆ ಘೋಷಣೆ

**<><*<><>*><>**

ಬಹು ನಿರೀಕ್ಷಿತ ೨೦೨೪ರ ಸಾರ್ವತ್ರಿಕ ಚುನಾವಣಾ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗದ ಪೂರ್ಣಪೀಠ, ದೆಹಲಿಯಲ್ಲಿ ಈಗ ಇಂದು ವಿಶೇಷ ಸುದ್ದಿಗೋಷ್ಠಿಯಲ್ಲಿ ಘೋಷಿಸಿದೆ. ಈ ಬಾರಿಯೂ ಲೋಕಸಭಾ ಚುನಾವಣೆ ಒಟ್ಟು ೭ ಹಂತಗಳಲ್ಲಿ ನಡೆಯಲಿದೆ. ಜೂನ್ ೪ರಂದು ಮತ ಎಣಿಕೆ ನಡೆಯಲಿದೆ. ಕರ್ನಾಟಕದಲ್ಲಿ ೨ ಹಂತಗಳಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಏಪ್ರಿಲ್ ೨೬ ಮತ್ತು ಮೇ ೭ ರಂದು ರಾಜ್ಯದಲ್ಲಿ ಮತದಾನ ನಡೆಯಲಿದೆ. ಚುನಾವಣೆಯ ದಿನಾಂಕ, ಮತ ಎಣಿಕೆ, ಮತದಾರರು ಮತ್ತು ಮತಗಟ್ಟೆಗಳ ಸಂಖ್ಯೆ ಮೊದಲಾದ ವಿವರಗಳನ್ನು ಚುನಾವಣಾ ಆಯೋಗದ ಮುಖ್ಯ ಆಯುಕ್ತರಾದ ರಾಜೀವ್ ಕುಮಾರ್ ಪ್ರಕಟಿಸಿದರು. ಸುದ್ದಿಗೋಷ್ಠಿಯಲ್ಲಿ ಇತ್ತೀಚೆಗೆ ಅಧಿಕಾರ ವಹಿಸಿಕೊಂಡಿರುವ ಕೇಂದ್ರ ಚುನಾವಣಾ ಆಯೋಗದ ಇಬ್ಬರೂ ಆಯುಕ್ತರಾದ ಜ್ಞಾನೇಶ್ ಕುಮಾರ್ ಮತ್ತು ಡಾ. ಎಸ್.ಎಸ್. ಸಂಧು ಹಾಗೂ ಚುನಾವಣಾ ಆಯೋಗದ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಲೋಕಸಭಾ ಚುನಾವಣಾ ಮತದಾನದ ವೇಳಾಪಟ್ಟಿ ಹೀಗಿದೆ.

ಮೊದಲನೆ ಹಂತ ಏಪ್ರಿಲ್ ೧೯,

ಎರಡನೇ ಹಂತ ಏಪ್ರಿಲ್ ೨೬,

ಮೂರನೇ ಹಂತ ಮೇ ೭,

ನಾಲ್ಕನೇ ಹಂತ ಮೇ ೧೩,

ಐದನೇ ಹಂತ ಮೇ ೨೦,

ಆರನೇ ಹಂತ ಮೇ ೨೫ ಹಾಗೂ

ಏಳನೇ ಮತ್ತು ಕೊನೆಯ ಹಂತದ ಮತದಾನ ಜೂನ್ ೧ ರಂದು ನಿಗದಿಯಾಗಿದೆ.

ಫಲಿತಾಂಶ ಘೋಷಣೆಯ ದಿನಾಂಕದವರೆಗೂ ದೇಶದ ಎಲ್ಲ ರಾಜ್ಯಗಳಲ್ಲಿ ನಡೆಯುವ ಹಬ್ಬಗಳು ಮತ್ತು ಪರೀಕ್ಷೆಗಳನ್ನು ಗಮನಿಸಿ ಚುನಾವಣಾ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಈ ಚುನಾವಣೆಯನ್ನು ಯಸಸ್ವಿಯಾಗಿ ನಡೆಸುವ ವಿಶ್ವಾಸವಿದೆ ಎಂದು ರಾಜೀವ್ ಕುಮಾರ್ ಹೇಳಿದರು.

ಧ್ವನಿ:ಆಯುಕ್ತರು

ವಿಶ್ವಾದ್ಯಂತ ಪ್ರಜಾಪ್ರಭುತ್ವ ವ್ಯವಸ್ಥೆಯಿರುವ ೫ ಡಜನ್‌ಗೂ ಹೆಚ್ಚು ರಾಷ್ಟ್ರಗಳಲ್ಲಿ ಈಗ ಚುನಾವಣಾ ಸಮಯವಾಗಿದೆ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆ ವಿಶ್ವದ ಗಮನ ಸೆಳೆಯುತ್ತದೆ. ಭೌಗೋಳಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ದೃಷ್ಟಿಯಿಂದ ಬೃಹತ್ತಾದ ಭಾರತದಲ್ಲಿ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸುವುದು ದೊಡ್ಡ ಸವಾಲಿನ ಕೆಲಸವಾದರೂ ಯಾವುದೇ ಕಪ್ಪು ಚುಕ್ಕಿ ಇಲ್ಲದಂತೆ ಇಂತಹ ದೊಡ್ಡ ಚುನಾವಣೆಗಳನ್ನು ನಡೆಸುವುದಕ್ಕೆ ಭಾರತ ಹೆಮ್ಮೆ ಪಡುತ್ತದೆ ಎಂದು ಅವರು ಹೇಳಿದರು.  ಈ ಬಾರಿ ೯೭ ಕೋಟಿಗೂ ಅಧಿಕ ನೋಂದಾಯಿತ ಮತದಾರರು ಮತದಾನದ ಅರ್ಹತೆ ಪಡೆದಿದ್ದಾರೆ. ೧೦.೦೫ ಲಕ್ಷ ಮತಗಟ್ಟೆಗಳನ್ನು ತೆರೆಯಲಾಗುವುದು. ದೂರದೂರದ ದುರ್ಗಮ ಪ್ರದೇಶಗಳಲ್ಲೂ ಜನರು ಸುಗಮವಾಗಿ ಮತದಾನದ ಹಕ್ಕು ಚಲಾಯಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗುವುದು. ಇದಕ್ಕಾಗಿ ೧.೫ ಲಕ್ಷ ಮತಗಟ್ಟೆ ಅಧಿಕಾರಿಗಳು ಮತ್ತು ಭದ್ರತಾ ಸಿಬ್ಬಂದಿ ನಿಯೋಜಿರಾಗಲಿದ್ದಾರೆ. ೫೫ ಲಕ್ಷ ವಿದ್ಯುನ್ಮಾನ ಮತ ಯಂತ್ರಗಳನ್ನು ಬಳಸಲಾಗುವುದು. ಭಾರತದಂತಹ ದೊಡ್ಡ ದೇಶದಲ್ಲಿ ಪ್ರತಿಯೊಂದು ಚುನಾವಣೆಯೂ ದೊಡ್ಡ ಪರೀಕ್ಷೆಯಿದ್ದಂತೆ. ಕಳೆದ ಒಂದೂವರೆ ವರ್ಷದಲ್ಲಿ ದೇಶದ ೧೧ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸಿರುವ ಅನುಭವದ ಮೇಲೆ ಈಗ ಈ ದೊಡ್ಡ ಚುನಾವಣೆಯನ್ನು ಸಹ ಯಾರೊಬ್ಬರೂ ಬೊಟ್ಟು ಮಾಡದಂತೆ ನಿಷ್ಪಕ್ಷಪಾತವಾಗಿ, ಪಾರದರ್ಶಕವಾಗಿ, ಯಶಸ್ವಿಯಾಗಿ  ಪೂರ್ಣಗೊಳಿಸುವ ಸಂಪೂರ್ಣ ವಿಶ್ವಾಸವಿದೆ ಎಂದು ರಾಜೀವ್ ಕುಮಾರ್ ತಿಳಿಸಿದರು. ಕೇಂದ್ರ ಚುನಾವಣಾ ಆಯೋಗ ಈಗಾಗಲೇ ದೇಶಾದ್ಯಂತ ೮೦೦ ಜಿಲ್ಲಾ ಮ್ಯಾಜಿಸ್ಟ್ರೇಟರ್‌ಗಳು, ಎಸ್‌ಪಿಗಳು, ಜಿಲ್ಲಾಧಿಕಾರಿಗಳು, ರಾಜಕೀಯ ಪಕ್ಷಗಳ ಪ್ರಮುಖರನ್ನು ಸಂಪರ್ಕಿಸಿದ್ದು, ಚುನಾವಣೆಯನ್ನು ಸುಗಮವಾಗಿ ನಡೆಸುವ ಕುರಿತು ಸಮಾಲೋಚನೆ ನಡೆಸಿದೆ ಎಂದು ಅವರು ತಿಳಿಸಿದರು. ಈ ಬಾರಿ ೪೯.೭ ಕೋಟಿ ಪುರುಷ ಹಾಗೂ ೪೭.೧ ಕೋಟಿ ರಷ್ಟು ಮಹಿಳಾ ಮತದಾರರಲ್ಲದೇ ೧.೮ ಕೋಟಿ ಯುವಮತದಾರರು ಮತದಾನದ ಮಹಾಪರ್ವದಲ್ಲಿ ಭಾಗವಹಿಸಲಿದ್ದಾರೆ. ಈ ವರ್ಷ ಏಪ್ರಿಲ್ ೧ ರಂದು ೧೮ ವರ್ಷ ತುಂಬುವ ನೋಂದಾಯಿತ ಯುವ ಮತದಾರರಿಗೂ ಮತದಾನದ ಅವಕಾಶ ನೀಡಲಾಗುವುದು. ೧೨ ರಾಜ್ಯಗಳಲ್ಲಿ ಪುರುಷರಿಗಿಂತ ಮಹಿಳಾ ಮತದಾರರ ಸಂಖ್ಯೆ ಅಧಿಕವಾಗಿದೆ. ಅಂದಾಜು ೨ ಲಕ್ಷಕ್ಕೂ ಅಧಿಕ ಶತಾಯುಷಿ ಮತದಾರರು ಈ ಬಾರಿ ತಮ್ಮ ಪವಿತ್ರ ಹಕ್ಕನ್ನು ಚಲಾಯಿಸುತ್ತಿರುವುದು ವಿಶೇಷವಾಗಿದೆ.

ಧ್ವನಿ:ಆಯುಕ್ತರು

೮೫ ವರ್ಷಕ್ಕಿಂತ ಹೆಚ್ಚಿನ ೮೨ ಲಕ್ಷಕ್ಕೂ ಅಧಿಕ ವೃದ್ಧರು, ಮತ್ತು ಶೇಕಡ ೪೦ಕ್ಕಿಂತ ಹೆಚ್ಚು ಅಂಗವೈಫಲ್ಯವಿರುವ ದಿವ್ಯಾಂಗ ಮತದಾರರ ನೆರವಿಗಾಗಿ ಇದೇ ಮೊದಲ ಬಾರಿಗೆ ಮನೆಗಳಿಂದಲೇ ಮತದಾನ ಮಾಡಲು ಅವಕಾಶ ಕಲ್ಪಿಸಲಾಗುವುದು ಎಂದರು.  ಭಾರತ ಚುನಾವಣಾ ಆಯೋಗ ಚುನಾವಣೆಗಳನ್ನು ಹಿಂಸಾರಹಿತ, ನಿರ್ಭೀತ ವಾತಾವರಣದಲ್ಲಿ ನಡೆಸಬಯಸುತ್ತದೆ. ಚುನಾವಣೆ ಸಂಬಂಧ ಯಾವುದೇ ಅಕ್ರಮದ ಬಗ್ಗೆ ಸಾರ್ವಜನಿಕರು ನೇರವಾಗಿ ಆಯೋಗದೊಂದಿಗೆ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಬಹುದು. ದೂರು ದಾಖಲಾದ ೧ ನೂರು ನಿಮಿಷದಲ್ಲಿ ಈ ಕುರಿತು ಸೂಕ್ತಕ್ರಮ ಕೈಗೊಳ್ಳಲಾಗುವುದು ಎಂದರು. ನಕಲಿ ಸುದ್ದಿಗಳ ಹಾವಳಿಗೆ ಸಂಪೂರ್ಣ ಕಡಿವಾಣ ಹಾಕಲು ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಸುಳ್ಳುಸುದ್ದಿಗಳನ್ನು ಹರಡುವವರ ವಿರುದ್ಧ ಐಟಿ ಕಾಯ್ದೆಯಡಿ ಕ್ರಮಕೈಗೊಳ್ಳಲಾಗುವುದು. ಈ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣಗಳ ಮೇಲೂ ಚುನಾವಣಾಧಿಕಾರಿಗಳು ಕಣ್ಣಿಡಲಿದ್ದಾರೆ. ಸುಳ್ಳು ಸುದ್ದಿಗಳ ಮೂಲಕ ಮತದಾರರ ದಿಕ್ಕು ತಪ್ಪಿಸುವವರ ಮೇಲೆ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು. ಮತದಾರರ ಮನವೊಲಿಕೆಗೆ ಹಣಬಲ, ಆಮಿಷಗಳನ್ನು ನೀಡುವುದು ಅಥವಾ ಮತದಾರರಲ್ಲಿ ಭೀತಿ ಹುಟ್ಟಿಸಲು ತೋಳ್ಬಲ ಮೊದಲಾದ ಅಕ್ರಮಗಳ ಮೇಲೆ ಸತತ ನಿಗಾ ಇಡಲಾಗುವುದು.

ಧ್ವನಿ:ಆಯುಕ್ತರು

ಚುನಾವಣೆ ಪೂರ್ಣಗೊಳ್ಳುವವರೆಗೂ ಅಕ್ರಮ ಹಣಕಾಸು, ಹೆಂಡ-ಸಾರಾಯಿ-ಮದ್ಯ, ಮತದಾರರಿಗೆ ಹಂಚುವ ವಸ್ತುಗಳ ಸಾಗಾಟದ ಮೇಲೆ ಹದ್ದಿನ ಕಣ್ಣಿಡಲು ಎಲ್ಲೆಡೆ ವಿಶೇಷ ಚೆಕ್‌ಪೋಸ್ಟ್‌ಗಳನ್ನು ಆರಂಭಿಸಲಾಗುವುದು. ಚುನವಣೆ ದಿನಗಳಲ್ಲಿ ಈ ಬಾರಿ ಆನ್‌ಲೈನ್ ಹಣ ಪಾವತಿಗಳ ಮೇಲೆ ಸಹ ವಿಶೇಷ ಗಮನ ಇರಿಸಲಾಗುವುದು ಎಂದು ಅವರು ಹೇಳಿದರು. ೨೦೨೪ರ ಲೋಕಸಭೆ ಚುನಾವಣೆಯ ವೇಳಾಪಟ್ಟಿ ಘೋಷಣೆಯೊಂದಿಗೆ ವಾಡಿಕೆಯಂತೆ ದೇಶಾದ್ಯಂತ ಚುನಾವಣಾ ಮಾದರಿ ನೀತಿ ಸಂಹಿತೆ ತಕ್ಷಣದಿಂದ ಜಾರಿಗೆ ಬಂದಿದೆ. ಪ್ರಚಾರದ ಸಂದರ್ಭದಲ್ಲಿ ಯಾವುದೇ ಪಕ್ಷ ಅಥವಾ ಅಭ್ಯರ್ಥಿ, ತಮ್ಮ ಭಾಷಣಗಳಲ್ಲಿ ಎಚ್ಚರವಹಿಸಬೇಕು. ಗಲಭೆ, ಅಪಾರ್ಥಗಳಿಗೆ ಕಾರಣವಾಗುವ ಅಂಶಗಳನ್ನು ಸಾಧ್ಯವಾದಷ್ಟು ಬಳಸಬಾರದು. ಯಾರಿಗೂ ಅಪಮಾನವಾಗದಂತೆ ಭಾಷೆ ಬಳಕೆ ಅಪೇಕ್ಷಣೀಯ. ೨ ಸಾವಿರದ ೧ ನೂರು ಚುನಾವಣಾ ವೀಕ್ಷಕರನ್ನು ನೇಮಿಸಲಾಗುವುದು. ರಾಜಕೀಯ ನಾಯಕರ ಭಾಷಣಗಳಲ್ಲಿ ಚುನಾವಣಾ ಆಯೋಗ ಸೂಚಿಸಿರುವ ನಿಯಮಗಳ ಕಟ್ಟುನಿಟ್ಟಿನ ಪಾಲನೆಯ ಮೇಲೆ ಈ ವೀಕ್ಷಕರು ನಿಗಾ ಇಡುತ್ತಾರೆ. ಮಕ್ಕಳನ್ನು ಚುನಾವಣಾ ಪ್ರಚಾರಕ್ಕೆ ಬಳಸುವಂತಿಲ್ಲ ಎಂದು ಸ್ಪಷ್ಟಪಡಿಸಿದರು. ಚುನಾವಣೆಯನ್ನು ನೈತಿಕವಾಗಿ ನಡೆಸಲು ಆಯೋಗ ಬದ್ಧವಾಗಿದೆ. ಇದೇ ಅಂಶವನ್ನು ರಾಜಕೀಯ ಪಕ್ಷಗಳಿಂದಲೂ ಆಯೋಗ ಎದುರುನೋಡುತ್ತದೆ ಎಂದರು. ಕೊನೆಯ ಹಂತದಲ್ಲಿ ೫೭ ಮತಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಮತದಾರರು ನಿರ್ಭೀತಿಯಿಂದ ತಮ್ಮ ಮತ ಚಲಾಯಿಸುವ ಹಕ್ಕನ್ನು ಚಲಾಯಿಸಬೇಕು ಎಂದು ಕೇಂದ್ರ ಮುಖ್ಯ ಚುನಾವಣಾ ಆಯುಕ್ತರು ಮನವಿ ಮಾಡಿದರು.

**<><*<><>*><>**

ಭ್ರಷ್ಟಾಚಾರ ನಿವಾರಿಸಿ ಅಭಿವೃದ್ಧಿ ಕೈಗೊಳ್ಳಲು ಜನತೆ ಲೋಕಸಭಾ ಚುನಾವಣೆಯಲ್ಲಿ ಬೆಂಬಲ ನೀಡಬೇಕು ಎಂದು ಹಿರಿಯ ಬಿಜೆಪಿ ಧುರೀಣ ಹಾಗು ಪ್ರಧಾನಮಂತ್ರಿ ನರೇಂದ್ರ ಮೋದಿ ಮನವಿ ಮಾಡಿದ್ದಾರೆ. ಅವರು, ಕರ್ನಾಟಕದ ಕಲಬುರಗಿಯಲ್ಲಿಂದು ಸಾರ್ವಜನಿಕ ರ್‍ಯಾಲಿ ಉದ್ದೇಶಿಸಿ ಮಾತನಾಡಿದರು. 'ಆಯುಷ್ಮಾನ್ ಭಾರತ್ ಯೋಜನೆಯಡಿ' ೮೦ ಲಕ್ಷ ಜನರು ಪ್ರಯೋಜ ಪಡೆದುಕೊಂಡಿದ್ದಾರೆ. ಕೊಳಾಯಿ ನೀರು ಒದಗಿಸುವ 'ಜಲಜೀವನ್ ಮಿಷನ್' ಅಡಿ ೭೫ ಲಕ್ಷ ಕುಟುಂಬಗಳು ಹಾಗು ಪಿಎಂ ಆವಾಸ್ ಯೋಜನೆಯಡಿ ೮ ಲಕ್ಷ ಜನರು ಮನೆ ಹಾಗೂ ಉಜ್ವಲ ಯೋಜನೆಯಡಿ ೪೦ ಲಕ್ಷಕ್ಕೂ ಅಧಿಕ ಮಹಿಳೆಯರು ಪ್ರಯೋಜನ ಪಡೆದಿದ್ದಾರೆ. ಕಲಬುರಗಿ-ರಾಯಚೂರು ನಡುವಿನ ಆರು ಪಥದ ಹೆದ್ದಾರಿ ಯೋಜನೆಗಾಗಿ ೬ ಸಾವಿರ ಕೋಟಿ ರೂಪಾಯಿ ಪ್ರಕಟಿಸಲಾಗಿದೆ. ಹುಮ್ನಾಬಾದ್-ಕಲಬುರಗಿ ರೈಲ್ವೆ ಯೋಜನೆ ಘೋಷಿಸಲಾಗಿದೆ. ತೊಗರಿ ಬೇಳೆಗೆ ಬೆಂಬಲ ಬೆಲೆ ಜಾರಿಗೊಳಿಸಲಾಗಿದ್ದು, ಕಲ್ಯಾಣ ಕರ್ನಾಟಕದ ಭಾಗದ ಜನರು ಇದರ ಪ್ರಯೋಜನ ಪಡೆದಿದ್ದಾರೆ ಎಂದರು. ಕರ್ನಾಟಕದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿ ವಿಫಲವಾಗಿದೆ. ದುಷ್ಕರ್ಮಿಗಳಿಗೆ ರಕ್ಷಣೆ ಒದಗಿಸುವ ಮೂಲಕ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿದೆ ಎಂದು ಆಪಾದಿಸಿದರು.

**<><*<><>*><>**

ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷ ಇನ್ನೂ ೨ ನ್ಯಾಯ್ ಗ್ಯಾರಂಟಿ ಘೋಷಿಸಿದೆ. ಬೆಂಗಳೂರಿನಲ್ಲಿಂದು ಸುದ್ದಿಗೋಷ್ಠಿ ನಡೆಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ನ್ಯಾಯಯಾತ್ರೆ ನಾಳೆ ಅಂತಿಮವಾಗಲಿದೆ. ಈ ವೇಳೆ ಅವರು ನ್ಯಾಯ್ ವರ್ಗಗಳಲ್ಲಿ ೧೫ ಗ್ಯಾರಂಟಿ ಭರವಸೆಗಳನ್ನು ಘೋಷಿಸಿದ್ದಾರೆ. ಇಂದು ಪಕ್ಷದ ವತಿಯಿಂದ ನಾಲ್ಕನೇದಾದ ಶ್ರಮಿಕನ್ಯಾಯ ಹಾಗೂ ಐದನೇದಾದ ಭಾಗೀದಾರರ ನ್ಯಾಯವನ್ನು ಘೋಷಿಸಿಸುತ್ತಿದ್ದೇವೆ. ಈ ಎಲ್ಲ ಗ್ಯಾರಂಟಿ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ನಿಗದಿತ ಕಾಲಮಿತಿಯೊಳಗೆ ಜಾರಿಗೊಳಿಸಲಿದೆ ಎಂದರು. ದೇಶದಲ್ಲಿ ಎಲ್ಲರಿಗೂ ನ್ಯಾಯ ಒದಗಿಸುವುದು ಈ ಯಾತ್ರೆಯ ಉದ್ದೇಶವಾಗಿದೆ. ಎನ್‌ಡಿಎ ಸರ್ಕಾರದ ಆಡಳಿತಾವಧಿಯಲ್ಲಿ ಕಾರ್ಮಿಕರ ಕಾಯ್ದೆಯನ್ನು ದುರ್ಬಲಗೊಳಿಸಲಾಗಿದೆ ಎಂದು ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

**<><*<>** ಇಲ್ಲಿಗೆ ಪ್ರದೇಶ ಸಮಾಚಾರ ಮುಗಿಯಿತು **<>*><>**

**<><*<>** ನಮ್ಮ ಮುಂದಿನ ವಾರ್ತಾ ಪ್ರಸಾರ ರಾತ್ರಿ ೭.೩೫ ಕ್ಕೆ **<>*><>**